ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 187 (1395)
2	ಸದಸ್ಯರ ಹೆಸರು	: ಶ್ರೀ.ಎಸ್.ವಿ.ಸಂಕನೂರ (ಪದವೀದರರ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	: 16–03–2021
4	ಉತ್ತರಿಸುವ ಸಚಿವರು	: ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಗದಗ–ಬೆಟಗೇರಿ ನಗರಕ್ಕೆ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆ ಯಾವಾಗ ಪ್ರಾರಂಭವಾಯಿತು; ಮತ್ತು ಈ ಯೋಜನೆ ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ ಎಷ್ಟು; ನಿಗಧಿ ಪಡಿಸಿದ ಅವಧಿಯನ್ನು ಎಷ್ಟು ಬಾರಿ ವಿಸ್ತರಿಸಲಾಗಿದೆ?	ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಗದಗ–ಬೆಟಗೇರಿ ನಗರಕ್ಕೆ 24/7 ನಿರಂತರ ನೀರು ಸರಬರಾಜು ಯೋಜನೆಯನ್ನು ರೂ.72.71 ಕೋಟಿಗೆ ಮೆ//.ಎಸ್‌ಪಿಎಂಎಲ್ ರವರಿಗೆ ದಿನಾಂಕ:24/12/2014 ರಲ್ಲಿ ಗುತ್ತಿಗೆ ವಹಿಸಲಾಗಿರುತ್ತದೆ. ಕರಾರಿನ ಪ್ರಕಾರ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಅವಧಿ 30 ತಿಂಗಳು ನಿಗದಿಪಡಿಸಲಾಗಿದೆ. ವ್ಯವಸ್ಥೆ ಪ್ರಯೋಗಿಕವಾಗಿ ಚಾಲನೆ ನಡೆಸಲು 3 ತಿಂಗಳ ಕಾಲಾವಧಿ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ (Operation & Maintenance) ಗಾಗಿ ಸಿವಿಲ್ ಕಾಮಗಾರಿ ಮುಕ್ತಾಯದ ನಂತರ 60 ತಿಂಗಳು ನಿಗದಿಪಡಿಸಲಾಗಿದೆ. ಹೆಚ್ಚುವರಿ ಕಾಮಗಾರಿಯ ಪರಿಮಾಣಗಳ ಕಾರಣಗಳಿಂದ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 7 ಬಾರಿ ವಿಸ್ತರಿಸಿ 28/02/2021ರ ವರೆಗೆ ಎಲ್ಲಾ ಕಾಮಗಾರಿ ಸಂಪೂರ್ಣಗೊಳಿಸಲು ಕಾಲ ವಿಸ್ತರಣೆ ಮಾಡಲಾಗಿದ್ದು, ಕೆಲವು ಕಾಮಗಾರಿಗಳು ಬಾಕಿ ಇರುವ ಕಾರಣ ಸದರಿ ಕಾಮಗಾರಿ ಸಂಪೂರ್ಣಗೊಳಿಸಲು ಮತ್ತೆ 31/05/2021 ರ ವರೆಗೆ ಕಾಲವಿಸ್ತರಣೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ)	24x7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ದಿನಾಂಕ: 04.06.2017 ರಲ್ಲಿ ಲೋಕಾರ್ಪಣೆ ಮಾಡಿರುವುದು ನಿಜವೇ?	ತುಂಗಭದ್ರಾನದಿ ಹಮ್ಮಿಗಿ ಬ್ಯಾರೇಜಿನ ಹತ್ತಿರದ ಮೂಲಸ್ಥಾವರದಿಂದ ಕಚ್ಚಾ ಸಗಟು ನೀರು ನಿರ್ಮಿಸಿ ಎರಡು ಹಂತದಲ್ಲಿ ಸುಮಾರು 55 ಕಿಮಿ ದೂರದಿಂದ ಶಿಂಗಟರಾಯಣ ಕೆರೆ ಹತ್ತಿರ ನಿರ್ಮಿಸಿರುವ ಶುದ್ಧೀಕರಣ ಘಟಕಕ್ಕೆ ಪಂಪ್ ಮಾಡಿ ಶುದ್ಧೀಕರಿಸಿದ ನೀರನ್ನು ಗದಗ–ಬೆಟಗೇರಿ ಅವಳಿ ನಗರಕ್ಕೆ ಜಲಸಂಗ್ರಹಗಾರಗಳ ಮುಖಾಂತರ ನಗರದ ಒಟ್ಟು 14 ವಲಯಗಳ ಪೈಕಿ 07 ವಲಯಗಳ ಹೊಸ ಕೊಳವೆ ಮಾರ್ಗ ಹಾಗೂ ಪೂರ್ಣಗೊಳಿಸಿರುವ ಮನೆ ಸಂಪರ್ಕಗಳಿಗೆ ಪ್ರಾಯೋಗಿಕವಾಗಿ ನೀರು ಸರಬರಾಜನ್ನು ಅಂದಿನ

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td></td><td></td><td>ಮಾನ್ಯ ಮುಖ್ಯ ಮಂತ್ರಿಗಳಿಂದ ದಿನಾಂಕ:04.06.2017ರಲ್ಲಿ ಚಾಲನೆಗೊಳಿಸಲಾಯಿತು. ಸದ್ಯಕ್ಕೆ ಈ ವ್ಯವಸ್ಥೆಯಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.</td></tr>
<tr><td>ಇ)</td><td>ಗದಗ-ಬೆಟಗೇರಿ ನಗರದಲ್ಲಿ 24x7 ಯೋಜನೆ ಅಡಿ ಎಷ್ಟು ಮನೆಗಳಿಗೆ ನೀರಿನ ಪೈಪ್ ಲೈನ್ ಕನೆಕ್ಷನ್ ಕೊಡಲಾಗಿದೆ; ಇನ್ನು ಎಷ್ಟು ಕೊಡಬೇಕಾಗಿದೆ ?</td><td>ಗದಗ-ಬೆಟಗೇರಿ ನಗರದಲ್ಲಿ 24x7 ಯೋಜನೆ ಕಾಮಗಾರಿ ಅಡಿ 41618 ಮನೆಗಳ ನಳ ಸಂಪರ್ಕವನ್ನು ಕರಾರಿನಂತೆ ನೀಡಬೇಕಾಗಿರುತ್ತದೆ. ಈ ಪೈಕಿ 36606 ಮನೆಗಳ ನಳ ಸಂಪರ್ಕವನ್ನು ನೀಡಲಾಗಿದೆ. ಬಾಕಿ 5012 ಸಂಖ್ಯೆ ಮನೆ ನಳ ಸಂಪರ್ಕ ಪ್ರಗತಿಯಲ್ಲಿದೆ.</td></tr>
<tr><td>ಈ)</td><td>24x7 ಕುಡಿಯುವ ನೀರು ಸರಬರಾಜು ಯೋಜನೆ ಪೂರ್ಣಗೊಳಿಸಲು ಇನ್ನು ಅಗಬೇಕಾದ ಕೆಲಸ ಕಾರ್ಯಗಳೇನು; (ವಿವರ ನೀಡುವುದು)</td><td>24x7 ಕುಡಿಯುವ ನೀರು ಸರಬರಾಜು ಯೋಜನೆ ಪೂರ್ಣಗೊಳಿಸಲು ಇನ್ನು ಆಗಬೇಕಾದ ಕೆಲಸ ಕಾರ್ಯಗಳ ವಿವರ ಕೆಳಗಿನಂತಿದೆ:
<table>
<tr><th>ಅಂಶಗಳು</th><th>ಕರಾರಿನಂತೆ ಪರಿಮಾಣ</th><th>ವೇರಿಯೇಷನ್ ಪರಿಮಣ</th><th>ಸಾಧನೆ ವೇರಿಯೇಷನ್ ಸೇರಿ</th><th>ಬಾಕಿ</th></tr>
<tr><td>HDPE ವಿತರಣ ಜಾಲದ ಪೈಪ್‌ಲೈನ</td><td>300.00 ಕಿ.ಮಿ</td><td>143.27 ಕಿ.ಮಿ</td><td>424.39 ಕಿ.ಮಿ</td><td>18.89 ಕಿ.ಮಿ</td></tr>
<tr><td>DI / HDPE ಫೀಡರ್ ಪೈಪ್‌ಲೈನ</td><td>6.01 ಕಿ.ಮಿ</td><td>6.00</td><td>10.25 ಕಿ.ಮಿ</td><td>1.76 ಕಿ.ಮಿ</td></tr>
<tr><td>ಗೃಹ ನಳ ಸಂಪರ್ಕ</td><td>41618 ಸಂಖ್ಯೆ</td><td>--</td><td>36606 ಸಂಖ್ಯೆ</td><td>5012 ಸಂಖ್ಯೆ</td></tr>
<tr><td>ಮೇಲ್ಮಟ್ಟದ ಜಲ ಸಂಗ್ರಹಗಾರ</td><td>05 ಸಂಖ್ಯೆ</td><td>--</td><td>04 ಸಂಖ್ಯೆ</td><td>01 ಸಂಖ್ಯೆ</td></tr>
<tr><td>ವಾಲ್ವ ಜೋಡಣೆ</td><td>1188 ಸಂಖ್ಯೆ</td><td>--</td><td>283 ಸಂಖ್ಯೆ</td><td>905 ಸಂಖ್ಯೆ</td></tr>
</table>
* ಸುಮಾರು 17.5 ಕಿ.ಮೀ ನಕ್ಷೆಯಲ್ಲಿ ಅನುಮೋದನೆ ಇಲ್ಲದಿರುವ ಕಡೆ ಅಳವಡಿಸಲಾಗಿದ್ದು, ಅದನ್ನು ಸಕ್ರಮಗೊಳಸಿಬೇಕಾಗಿದೆ.</td></tr>
<tr><td>ಉ)</td><td>ಈ ಯೋಜನೆ ಪೂರ್ಣಗೊಳಿಸಲು ಇನ್ನು ಎಷ್ಟು ಕಾಲಾವಕಾಶ ಬೇಕು?</td><td>ಗುತ್ತಿಗೆದಾರರು ಸದರಿ ಕಾಮಗಾರಿ ಸಂಪೂರ್ಣಗೊಳಿಸಲು ಮತ್ತೆ ದಿನಾಂಕ:31/05/2021 ರವರೆಗೆ ಕಾಲವಿಸ್ತರಣೆ ಕೋರಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.</td></tr>
</table>

ಕಡತ ಸಂಖ್ಯೆ: ನಅಇ 71 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು